ಮೇಷ್ಟ್ರು ಮಾತುಗಳು ಕಣ್ಣ ಮುಂದೆ ಬಂದವು. “ಮುಗ್ಧತೆ ಎಂದಿಗೂ ಹೊರೆಯಾಗಬಾರದು ಕಣಯ್ಯಾ. ಮನುಷ್ಯರ ಸಣ್ಣತನ ಗೊತ್ತಿದ್ದೂ ಅವರೊಂದಿಗೆ ಕಾಳಜಿಯಿಂದ ವರ್ತಿಸೋ ಬುದ್ಧಿ ಬೇಕು. ಅದಕ್ಕೆ ಮುಗ್ಧತೆ ಬೇಕೇ ಬೇಕು ನಿಜ. ಆದ್ರೆ ಅದು ನಮ್ಮನ್ನು ನುಂಗಿ ನೀರು ಕುಡಿಯೋವಷ್ಟು ಬೋಳೆಯಾಗಿರಬಾರದು.” ಸರ್ಕಾರಿ ಆಸ್ಪತ್ರೇಲಿ ಕೆಲ್ಸಾ ಮಾಡೋದು ಸವಾಲಿನ ಕೆಲಸ ಅಂತ ಓದುವಾಗಲೇ ಮೇಷ್ಟ್ರು ಹೇಳಿಕೊಟ್ಟಿದ್ದಷ್ಟೇ ಅಲ್ಲ, ರಾಕ್ಷಸನಾಗದೇ ಜನರನ್ನು ನಿಭಾಯಿಸೋ ಕಲೆಯನ್ನೂ ಕಲಿಸಿಕೊಟ್ಟಿದ್ದರು. ಅದರ ಫಲವೇ ರಾಮಸ್ವಾಮಿಗೆ ವಿಷಯ ಮುಟ್ಟಿಸುವ ಆಲೋಚನೆ ಮೂಡಿದ್ದು.

## 2

ಮೆಡಿಕಲ್ ಕಾಲೇಜಿಗೆ ಸೇರಿದ ಮೊದಲ ದಿನವೇ ಷರೀಫ್ ಮೇಷ್ಟ್ರು ರಾಘವನ್‌ಗೆ ಇಷ್ಟವಾಗಿದ್ದರು. ಮೊದಲ ಕ್ಲಾಸಿನಲ್ಲೇ ಅನಿಕೇತನ ಪದ್ಯದ ಸಾಲು ಹೇಳಿದ್ದನ್ನು ಕೇಳಿ ರೋಮಾಂಚನವಾಗಿತ್ತು. ಕುವೆಂಪು ಪದ್ಯಗಳನ್ನು ಕೇಳುತ್ತಲೇ ಬೆಳೆದಿದ್ದ ರಾಘವನ್‌ಗೆ ಮೆಡಿಕಲ್ ಕಾಲೇಜಿನ ಮೇಷ್ಟ್ರು ಷರೀಫರು, “ವೈದ್ಯ ಒಂದು ಮಾನವ ಚೇತನ ಅಷ್ಟೇ. ದೇವರಲ್ಲ. ನೀವು ತರಬೇತಿ ಪಡೆದ ಮನುಷ್ಯರು ಅನ್ನೋದು ಎಂದಿಗೂ ನೆನಪಿರಲಿ” ಎನ್ನುತ್ತಾ ಮನುಷ್ಯ ಚೇತನದ ಕುರಿತು ವಿವರಿಸುವಾಗ ಕುವೆಂಪು ಪದ್ಯವನ್ನು ಉದಾಹರಣೆಯಾಗಿ ನೀಡಿದರು. ಮುಂದುವರಿದು ಅದೇ ಕವಿ, “ಉಳುವಾ ಯೋಗಿಯ ನೋಡಲ್ಲಿ” ಅಂತ ರೈತನ ಬಗ್ಗೆ ಹೇಳುತ್ತಾರೆ. ನೀವು ವೈದ್ಯರೂ ಅಷ್ಟೇ. ಮನುಷ್ಯನ ನೋವನ್ನು ಕಡಿಮೆಗೊಳಿಸಲು ಇರುವವರು. ಒಬ್ಬ ರೈತ ತನ್ನ ಬೆಳೆಯನ್ನು ಎಲ್ಲರಿಗೂ ಕೊಡ್ತಾನೆ. ತನ್ನ ಬೆಳೆಯನ್ನು ಪಡೆಯುತ್ತಿರುವ ವ್ಯಕ್ತಿ ಕಳ್ಳನೋ, ಕೊಲೆಗಾರನೋ ಅಥವಾ ರಾಜನೋ ಅಂತ ನೋಡೋದಿಲ್ಲ. ಮನುಷ್ಯ ಅಂತ ನೋಡ್ತಾನೆ. ಹಾಗೆ ವೈದ್ಯನಿಗೂ ಅಷ್ಟೆ. ರೋಗಿ, ಒಬ್ಬ ಮನುಷ್ಯ ಅಷ್ಟೆ. ಉಳಿದೆಲ್ಲಾ ವಿಚಾರಗಳು ಮುಖ್ಯ ಅಲ್ಲ. ವೈದ್ಯನಾಗೋಕೆ ಬುದ್ಧಿ ಅಷ್ಟೇ ಸಾಕಾಗುವುದಿಲ್ಲ. ಹೃದಯ ಬೇಕು. ಅದರಲ್ಲೂ ಜೋಪಾನ ಮಾಡುವ ತಾಯಿ ಹೃದಯ ಬೇಕು’’ ಎಂದಿದ್ದರು. ಷರೀಫ್ ಮೇಷ್ಟ್ರು ಮಾತುಗಳನ್ನು ಬಾಯಿ ಬಿಟ್ಟುಕೊಂಡೇ ಕೇಳಿಸಿಕೊಂಡಿದ್ದರು. ಅಪ್ಪನ ಬಾಯಿಗೆ ಹೆದರಿ ಮೆಡಿಕಲ್ ಕೋರ್ಸ್‌ನಲ್ಲಿ ಸೀಟು ಗಿಟ್ಟಿಸಿಕೊಂಡಿದ್ದವರಿಗೆ ಮೊದಲ ಬಾರಿಗೆ ತಾನು ಬಂದಿರುವ ಜಾಗ ಸರಿಯಿದೆ ಎನ್ನಿಸಿತ್ತು.

ಮೂವತ್ತೈದು ವರ್ಷದ ಹಿಂದೆ ಷರೀಫ್ ಮೇಷ್ಟ್ರು ಹೇಳಿದ್ದ ಮಾತುಗಳು ಇಂದಿಗೂ ಜೀವಂತವಿದ್ದವು. ಮೂವತ್ತು ವರ್ಷದ ಹಿಂದೆ ವೈದ್ಯನಾಗಿ ಸರ್ಕಾರಿ ಆಸ್ಪತ್ರೆಗೆ ಬಂದ ರಾಘವನ್‌ರನ್ನು ಹೆಜ್ಜೆ ಹೆಜ್ಜೆಗೂ ಕಾಪಾಡಿರುವುದು ಷರೀಫ್ ಮೇಷ್ಟ್ರು ಮಾತುಗಳೇ. ಕಾಯಿಲೆ –ಚಿಕಿತ್ಸೆ ಕುರಿತು ಹೇಳುವಷ್ಟೇ ಸಲೀಸಾಗಿ ಪದ್ಯಗಳನ್ನು ಹೇಳುತ್ತಿದ್ದ ಷರೀಫರು ಕಲಿಸಿಕೊಟ್ಟಿದ್ದು ಕೇವಲ ಡಾಕ್ಟರಿಕೆ ಮಾತ್ರವಾಗಿರದೆ, ಕೆಟ್ಟು ಕೆರ ಹಿಡಿಯದೇ ಸರ್ಕಾರಿ ವ್ಯವಸ್ಥೆಯಲ್ಲಿ ಬದುಕುವುದು ಹೇಗೆಂದು ಸಹ ಕಲಿಸಿಕೊಟ್ಟಿದ್ದರು. ಐದಡಿ ಮೀರದ ತೆಳ್ಳಗಿನ ಷರೀಫ್‌ರ ಬಾಯಿಲ್ಲಿ ಕನ್ನಡದ ಕವಿತೆಗಳು ಯಾವಾಗಲೂ ಇರುತ್ತಿದ್ದವು. ಮೂಡಿದ್ದರೆ ಆಡುತ್ತಿದ್ದರು ಕೂಡ. ಇರುವ ಜಾಗದಲ್ಲೇ ಪದಗಳ ದೋಣಿ ಏರಿ ಇಲ್ಲವಾಗುವ ಕಲೆಯನ್ನು ಸಿದ್ಧಿಸಿಕೊಂಡಿದ್ದರು. ಸಿದ್ಧಿಸಿಕೊಳ್ಳುವ ದಾರಿಯನ್ನು ರಾಘವನ್‌ರಿಗೂ ಕಲಿಸಿದ್ದರು. ಅವರನ್ನು ರಾಘವನ್ ತುಂಬಾ ಹಚ್ಚಿಕೊಂಡಿದ್ದರು. ಅವರೂ ಅಷ್ಟೇ. ರಾಘು ಇಲ್ಲವೇ ರಾಘವ ಎನ್ನುತ್ತಿದ್ದರು.

ರಾಘವನ್‌ರ ಕೈ ಮತ್ತೆ ಸಿಗರೇಟಿಗೆ ತಡಕಾಡಿತು. ಕುರ್ಚಿಯಿಂದ ಎದ್ದು ಎಮರ್ಜೆನ್ಸಿ ಬಾಗಿಲು ತೆರೆದು ಸಿಗರೇಟು ಹಚ್ಚಿ ನಿಂತರು. “ನೋಡಯ್ಯಾ ಈ ಸಿಗರೇಟಿನಲ್ಲಿರೋ ನಿಕೋಟಿನ್ ಇದ್ಯೆಲ್ಲಾ ಅದು ಔಷಧಿನೇ. ಬಟ್ ಸ್ವಲ್ಪ ಎಡವಟ್ಟು ಔಷಧಿ ಅಷ್ಟೇ. ದುಃಖದ ಸಂದರ್ಭಗಳಲ್ಲಿ, ಒತ್ತಡದ